ಮಂತ್ರಿಗಳ ಹೇಳಿಕೆ

ಕೊಡಗಿನ ಜೈಲಿನಲ್ಲಿ ನಡೆದಂತಹ ಘಟನೆಯ ಬಗ್ಗೆ.

ಶ್ರೀ ವೀರಣ್ಣ (ಹಣಕಾಸು, ಸಣ್ಣ ಉಳಿತಾಯ ಮತ್ತು ಬಂಧುದಿನೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಖಿರ್ಗೆಯವರು, ಮಾನ್ಯ ಪಾಟೀಲರು ಕೊಡಗಿನ ಜೈಲಿನಲ್ಲಿ ಆದಂಥ ಘಟನೆಯ ಬಗ್ಗೆ ಸವಿಸ್ತಾರವಾದ ಹೇಳಿಕೆಯನ್ನು ಕೊಡಬೇಕೆಂದು ಕೇಳಿದ್ದರು. ತಾವು ಅಪ್ಪಣೆ ಕೊಟ್ಟರೆ, ಆ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಅಧ್ಯಕ್ಷರು.—ಆಯಿತು, ಸ್ಟೇಟ್‌ಮೆಂಟ್ ಮಾಡಿ.

ಶ್ರೀ ವೀರಣ್ಣ —ಮಾನ್ಯ ಅಧ್ಯಕ್ಷರೇ, ದಿನಾಂಕ ೨೮-೫-೧೯೮೮ರ ಬೆಳಿಗ್ಗೆ ಸುಮಾರು ೧೧ ಘಂಟೆಯಲ್ಲಿ ಮಡಿಕೇರಿಯಿಂದ ೮ ಕಿ.ಮೀ. ದೂರದಲ್ಲಿರುವ ಕಟಗೇರಿ ಗ್ರಾಮದಲ್ಲಿ ಗ್ರಾಮಸ್ಥರು, ಬಿ.ಜಿ. ಮುತ್ತಣ್ಣ ಎಂಬ ಕೊಲೆ ಮೊಕದ್ದಮೆಯ ಅಪರಾಧಿ, ಇಬ್ಬರು ಕಾರಾಗೃಹದ ಸಿಬ್ಬಂದಿ ಮತ್ತು ಇತರ ಖೈದಿಗಳ ಜೊತೆ ಮರದ ತುಂಡುಗಳನ್ನು ಲೋಕೋಪಯೋಗಿ ಲಾರಿಯಲ್ಲಿ ತಲಕಾವೇರಿ ಪ್ರದೇಶದಲ್ಲಿ ಸಾಗಿಸಲು ಪ್ರಯತ್ನಿಸುತ್ತಿರುವುದನ್ನು ಗಮನಿಸಿದರು ಗ್ರಾಮಸ್ಥರು ಕೊಲೆ ಆಪಾದಿತ ಮುತ್ತಣ್ಣ ಇರುವುದನ್ನು ಗಮನಿಸಿ ಮತ್ತು ಮರ ಸಾಗಾಣಿಕೆಗೆ ಪರ್ಮಿಟ್ ಇಲ್ಲದಿರಬಹುದೆಂಬ ಸಂಶಯದ ಮೇಲೆ ಅವರನ್ನೆಲ್ಲಾ ಹಿಡಿದುಕೊಂಡರು. ಈ ಘಟನೆಯ ಬಗ್ಗೆ ಎ.ಎಸ್. ಬೋಜಪ್ಪ ಮತ್ತು ಹೆಚ್.ಬಿ. ರಾಜೇಂದ್ರ ಎಂಬುವವರ ಮಾಹಿತಿಯ ಮೇಲೆ ಮಡಿಕೇರಿ ಪೋಲೀಸ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೋಲೀಸ್ ಸಬ್ ಇನ್‌ಪೆಕ್ಟರ್ ಮತ್ತು ಸಿಬ್ಬಂದಿ ವರ್ಗದವರು ಸ್ಥಳಕ್ಕೆ ದಾವಿಸಿ, ಗ್ರಾಮಸ್ಥರು ಹಿಡಿದಿಟ್ಟುಕೊಂಡಿದ್ದ ಆರೋಪಿಗಳನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು. ಲೋಕೋಪಯೋಗಿ ಲಾರಿ ನಂ. ಸಿಎಜಿ ೪೫೧೧ ರಲ್ಲಿ ಸಾಗಿಸಲು ಪ್ರಯತ್ನಪಟ್ಟ ೧.೩ ಘಾಗ ಲಾರಿ ಲೋಡಿನಷ್ಟು ಮರದ ತುಂಡನ್ನು ವಶಪಡಿಸಿಕೊಂಡರು. ಬಂಧಿಸಲ್ಪಟ್ಟವರ ಹೆಸರುಗಳು ಕೆಳಕಂಡಂತಿವೆ.

(೧) ಬಿ.ಜಿ. ಮುತ್ತಣ್ಣ (೨) ಎಂ.ಕೆ. ನಿಂಗಪ್ಪ (೩) ಜಿ.ವಿ. ಅಪ್ಪಾಸ್ವಾಮಿ (೪) ಪಾರಬಾಬು (೫) ಹೆಚ್.ಯು. ಅಪ್ಪಣ್ಣ (೬) ಎಂ.ಎ. ತಿಮ್ಮಯ್ಯ (೭) ಕೆ.ಎಂ. ಕುನ್ನಿಕಣ್ಣನ್ (೮) ಜಿ.ಆರ್. ಚಂದ್ರಶೇಖರ್ (೯) ಎಂ. ಶ್ರೀನಿವಾಸ್, ಜೈಲರ್ (೧೦) ಫಿರೋಜ್ ಪಾಷ, ಹೆಡ್ ವಾರ್ಡರ್ (೧೧) ಎಂ. ವೆಂಕಟೇಶ್, ಪಿ.ಡಬ್ಲ್ಯೂ.ಡಿ. ಲಾರಿ ಚಾಲಕ.

ಈ ಮೇಲ್ಕಂಡವರ ಮೇಲೆ ಭಾರತೀಯ ದಂಡ ಸಂಹಿತೆ ಕಲಂ ೪೪೭, ೩೭೯, ೧೪೮ ಮತ್ತು ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ ೧೯೬೫ರ ನಿಯಮ ೮ ಮತ್ತು ೨೨ಜಿ ಪ್ರಕಾರ ಕ್ರೈಮ್ ಸಂಖ್ಯೆ: ೧೧೬.೮೮ ರಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡು ಅದೆ ದಿನ ಎಲ್ಲರನ್ನು ದಸ್ತಗಿರಿ ಮಾಡಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ೧ ರಿಂದ ೮ ರವರೆಗಿನ ಆರೋಪಿಗಳು ಈಗಾಗಲೇ ವಿಚಾರಣಾಧೀನ ಖೈದಿಗಳಾಗಿದ್ದು ಅವರನ್ನು ನ್ಯಾಯಾಂಗ ಕಸ್ಟಡಿಗೂ ಮತ್ತು ಉಳಿದ ೩ ಜನರನ್ನು ಜಾಮೀನಿನ ಮೇಲೆ ಬಿಡಲಾಯಿತು.

ಇದರ ಬಗ್ಗೆ ಭಾರತೀಯ ದಂಡ ಸಂಹಿತೆ ಮತ್ತು ಅರಣ್ಯ ಕಾನೂನಿನ ಕಲಂಗಳಡಿಯಲ್ಲಿ ದಾಖಲಾಗಿರುವ ಮೊಕದ್ದಮೆಯ ತನಿಖೆ ಮುಂದುವರಿಯುತ್ತಿದೆ.

ದಿನಾಂಕ ೨೯-೫-೧೯೮೮ರಂದು ಕಾರಾಗೃಹಗಳ ಮಹಾನಿರೀಕ್ಷಕರು ಮೈಸೂರಿನ ಕೇಂದ್ರ ಕಾರಾಗೃಹದ ಅಧೀಕ್ಷಕರಾದ ಶ್ರೀ ಎಂ.ಜಿ. ತಾವರೆಖೇಡ ಇವರಿಗೆ ಮಡಿಕೇರಿ ಜಿಲ್ಲಾ ... . ಕಾರಾಗೃಹಕ್ಕೆ ಭೇಟಿಯಿತ್ತು, ಅವಲೋಕನ ತನಿಖೆ ನಡೆಸಿ ಸದರಿ ಘಟನೆಗಳ ಬಗ್ಗೆ ವಿವರವಾದ ವರದಿಯನ್ನು ಕಳಿಸಲು ನಿರ್ದೇಶಿಸಿದ್ದರು. ದಿನಾಂಕ ೨೯, ೩೦ ಮತ್ತು ೩೧-೫-೧೯೮೮ ಹಾಗೂ ೦೧-೦೬-೧೯೮೮ ರಂದು ಮಡಿಕೇರಿಯಲ್ಲಿ ಮೈಸೂರಿನ ಕೇಂದ್ರ ಕಾರಾಗೃಹದ ಅಧೀಕ್ಷಕರು ವಾಸ್ತವ್ಯ ಹೂಡಿ ತನಿಖೆ ನಡೆಸಿ ವರದಿಯನ್ನು ದಿನಾಂಕ ೦೩-೦೬-೧೯೮೮ ರಂದು ಮಹಾನಿರೀಕ್ಷಕರಿಗೆ ಒಪ್ಪಿಸಿರುತ್ತಾರೆ. ಕಾನೂನಿಗೆ ವಿರೋಧವಾಗಿ ಜೈಲಿನಲ್ಲಿರುವ ಖೈದಿಗಳನ್ನು ಮಡಿಕೇರಿ ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ಶ್ರೀ ಸುರೇಶ್‌ಬಾಬು, ಜೈಲರ್ ಶ್ರೀನಿವಾಸ ಮತ್ತು ವಾರ್ಡರ್ ಶ್ರೀ

ಕೆ.ಪಿ. ಪಿರೋಜಪಾಶ ಇವರುಗಳು ಖೈದಿಗಳನ್ನು ಅಕ್ರಮವಾಗಿ ಉಪಯೋಗಿಸಿಕೊಂಡು ಶ್ರೀಮತಿ ವಾಮಾಕ್ಷಮ್ಮ ಅವರ ಜಮೀನಿನಲ್ಲಿ ಕಾನೂನು ಬಾಹಿರವಾಗಿ ಮರಗಳನ್ನು ಕಡಿದು ಸಾಗಿಸುತ್ತಿದ್ದರೆಂದು ವರದಿಯಾಗಿದೆ.

ಈ ವರದಿ ಆಧಾರದ ಮೇಲೆ ಮಂಡಿಕೇರಿ ಕೇಂದ್ರ ಕಾರಾಗೃಹದ ಅಧೀಕ್ಷಕರಾದ ಶ್ರೀ ಸುರೇಶ್‌ಬಾಬು, ಜೈಲರ್ ಶ್ರೀ ಶ್ರೀನಿವಾಸ್ ಮತ್ತು ಹೆಡ್ ವಾರ್ಡರ್ ಶ್ರೀ ಕೆ.ಪಿ. ಪಿರೋಜ್ ಪಾಶ ಅವರುಗಳನ್ನು ದಿನಾಂಕ ೦೬-೦೯-೧೯೮೮ ರಂದು ಅಮಾನತ್ತಿನಲ್ಲಿ ಇಡಲಾಗಿದೆ ಮತ್ತು ಇಲಾಖಾ ವಿಚಾರಣೆಯನ್ನು ಮುಂದುವರೆಸಲಾಗುವುದು.

ಈ ಘಟನೆಯಲ್ಲಿ ಸಹಭಾಗಿಗಳಾದ ಕಾಮಗಾರಿ ಇಲಾಖೆಯ ನೌಕರರ ಮೇಲು ಸಹ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ಆದೇಶ ನೀಡಲಾಗಿದೆ.

ಮತ್ತು ಇದರ ಬಗ್ಗೆ ಜೈಲ್ ಸೂಪರಿಂಟೆಂಡೆಂಟ್ ಆಗಿರತಕ್ಕವರ ಮೇಲೆ ಏತಕ್ಕೆ ಕ್ರಿಮಿನಲ್ ಕೇಸ್ ಹಾಕಿಲ್ಲ ಎಂಬ ಮಾತನ್ನು ಕೇಳಬಹುದು. ಈ ವರದಿ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲು, ಈ ವರದಿಯನ್ನು ಮಂಡಿಕೇರಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರಿಗೆ ತಕ್ಷಣ ಕಳುಹಿಸಿ ಅವರ ಮೇಲೂ ಸಹ ಕ್ರಿಮಿನಲ್ ಮೊಕದ್ದಮೆ ಮಾಡುವುದಕ್ಕೆ ನಿರ್ದೇಶನ ನೀಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ ಆಯಿತು. ಇದರ ಬಗ್ಗೆ ನಿನ್ನೆ ಅವರು ಹೇಳಿದ್ದರು, ಇವತ್ತು ಇದು ಜಾರಿಯಲ್ಲಿ ಬಂತು. ಆದರೆ ಇದರ ಬಗ್ಗೆ ಡಿಟೇಲ್ ಎನ್‌ಕ್ವೈರಿ ಆಗಬೇಕು. ಜೈಲಿನಲ್ಲಿರತಕ್ಕಂಥ ಆರೋಪಿಗಳು ಏನಿದ್ದಾರೆ, ಬಿ. ಬಿ. ಮುತ್ತಣ್ಣನಿಂದ ಹಿಡಿದುಕೊಂಡು ಚಂದ್ರಶೇಖರ್‌ವರೆಗೆ ೮ ಜನ ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇದೇರೀತಿಯಾಗಿ ಎಷ್ಟು ಮರಗಳನ್ನು ಅವರು ಕಡಿದು ಕಳ್ಳಸಾಗಾಣಿಕೆ ಮಾಡಿದ್ದಾರೆ. ಹಾಗೂ ಹೊರಗಡೆ ಒಯ್ದಿದ್ದಾರೆ ಎಂಬುದು ಇದರಿಂದ ಗೊತ್ತಾಗುವುದಿಲ್ಲ. ಇದೊಂದು ಕೇಸ್ ಏನೋ ಜನರ ಕಣ್ಣಿಗೆ ಬಿತ್ತು. ಆ ಊರಿನ ಜನಗೇ ಇದನ್ನು ಹಿಡಿದರು. ಪೊಲೀಸರು, ಬೇರೆ ಅಧಿಕಾರಿಗಳು ಅಥವಾ ಫಾರೆಸ್ಟ್ ಆಫೀಸರ್‌ಗಳು ಇದನ್ನು ಹಿಡಿಯಲಿಲ್ಲ ಇದೊಂದೇ ಕೇಸ್ ಈ ರೀತಿ ಆಗಿಲ್ಲ. ಇದೇ ರೀತಿಯಾಗಿ ಎಷ್ಟು ಕೇಸ್‌ಗಳು ಈ ಜೈಲ್ ಇಲಾಖೆಯಲ್ಲಿ ಈ ರೀತಿ ಆಗಿದೆ ಎಂಬುದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕಾದರೆ ಇದಕ್ಕೆ ಸಿ.ಒ.ಡಿ. ಎನ್‌ಕ್ವೈರಿ ಮಾಡಬೇಕು. ಇದೊಂದು ಕೇಸ್‌ನಲ್ಲಿ ಅವರಿಗೆ ಶಿಕ್ಷೆ ಕೊಟ್ಟರೆ ನಮಗೆ ಸಮಾಧಾನವಾಗಬಹುದೆ ಎಂಬುದಲ್ಲ. ನಮಗೂ ನಿಮಗೂ ಸಮಾಧಾನವಾಗುವ ಪ್ರಶ್ನೆ ಅಲ್ಲ. ಈ ರೀತಿಯಾಗಿ ಅಧಿಕಾರಿಗಳ ಕೈಗೆ ಕಾನೂನನ್ನು ರಕ್ಷಣೆ ಮಾಡಲಿಕ್ಕೆ ಅಧಿಕಾರ ಕೊಟ್ಟರೆ ಅವರು ಅದನ್ನು ಯಾವರೀತಿ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದನ್ನು ನೋಡಬೇಕು. ಇಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್‌ರವರ ವಿಚಾರ ಏನೂ ಬಂದಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದು ಇದರಲ್ಲಿ ಬಂದಿಲ್ಲ. ಲಾರಿ ಡ್ರೈವರ್ ವಿಚಾರ ಬಂದಿದೆ. ಆದರೆ ಅವನು ಯಾರ ಕಂಟ್ರೋಲ್‌ನಲ್ಲಿ ಕೆಲಸ ಮಾಡುತ್ತಾನೆ, ಆ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್, ಜೈಲರ್, ಫಾರೆಸ್ಟ್ ಆಫೀಸರ್ ಇವರು ಮೂವರೂ ಒಂದುಕಡೆ ಸೇರದೇ ಹೋದರೆ ಈ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ. ಇದೆಲ್ಲಾ ಹೊರಗಡೆ ಬರಬೇಕಾದರೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕಾದರೆ, ಮುಂದೆ ಈ ರೀತಿಯಾದ ಘಟನೆಗಳು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕಾದರೆ, ಮುಂದೆ ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಕಂಡಕ್ಟ್ ಮಾಡಿ, ಆಗ ಇಂತಹ ಎಲ್ಲಾ ಕೇಸುಗಳು ಹೊರಗಡೆ ಬರುತ್ತದೆ. ಈ ಇಲಾಖೆ ಮಂತ್ರಿಮಂತ್ರಿಗಳ ಕಡೆ ಇದೆ, ತಮ್ಮ ಕಡೆಗೂ ಇದೆ, ಇದರಲ್ಲಿ ಬೇರೆ ಯಾರವೇಲೂ ಏನೂ ಆರೋಪ ಇಲ್ಲ. ಸರ್ಕಾರದ ಮೇಲೆ ಏನಾದರೂ ಬರುತ್ತದೆ ಎಂದೂ ಇಲ್ಲ. ಮಂತ್ರಿಗಳ ಮೇಲೂ ಹೇಳುತ್ತಿಲ್ಲ. ಅಧಿಕಾರಿಗಳು ನೇರವಾಗಿ ಯಾವ ರೀತಿಯಾಗಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರು ಎಂಬ ವಿಚಾರ ಇದೆ, ಸರ್ಕಾರದ ಮೆಷಿನರಿಯನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಾರೆ ಎಂಬುದು ತಮ್ಮ ನೋಟೀಸಿಗೆ ಬಂದಿದೆ, ನೀವು ಒಪ್ಪಿಕೊಂಡಿದ್ದೀರಿ, ಅಂದಮೇಲೆ ಇದರ ಬಗ್ಗೆ ಒಂದು ಸಿ.ಒ.ಡಿ. ಎನ್‌ಕ್ವೈರಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.— ಮಾನ್ಯ ಅಧ್ಯಕ್ಷರೇ, ಪಿ.ಡಬ್ಲ್ಯೂ.ಡಿ. ನೌಕರರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಈ ವರದಿ ಆಧಾರದ ಮೇಲೆ ನಾವು ಮೇಲಧಿಕಾರಿಗಳಿಗೆ ಸೂಚನೆ

ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟ ನೌಕರರ ಮೇಲೆಯೂ ಸಹ ಕಾನೂನು ಕ್ರಮ ತೆಗೆದು ಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಡ್ರೈವರ್‌ನ್ನಾಗಲೀ, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್‌ನ್ನಾಗಲೀ ಸಸ್ಪೆಂಡ್ ಮಾಡುವುದಕ್ಕೆ ನನಗೆ ಅಧಿಕಾರ ಬರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವರದಿ ಆಧಾರದ ಮೇಲೆ ಕ್ರಮ ತೆಗೆದು ಕೊಳ್ಳಬೇಕೆಂದು ಕಳುಹಿಸಿಕೊಟ್ಟಿದ್ದೇವೆ. ಸಿ.ಒ.ಡಿ. ತನಿಖೆ ಮಾಡಬೇಕೆಂದು ನಮ್ಮ ಸ್ನೇಹಿತರಾಗಿರತಕ್ಕಂಥ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಮೈಸೂರಿನ ಜೈಲ್ ಸೂಪರಿಂಟೆಂಡೆಂಟ್‌ರವರು ಈಗಾಗಲೇ ನಾಲ್ಕು ದಿವಸ ಎಲ್ಲಾ ಸ್ಥಳಗಳಿಗೂ ಹೋಗಿ ತನಿಖೆ ಮಾಡಿದ್ದಾರೆ. ಹೇಗೆ ಹೋಗಿದ್ದರು, ಏತಕ್ಕೋಸ್ಕರ ತೆಗೆದುಕೊಂಡು ಹೋಗಿದ್ದರು ಎಂಬ ಬಗ್ಗೆ ಹೇಳಿದ್ದಾರೆ. ಈ ಸಂದರ್ಭದಲ್ಲಿ ಸುರೇಶ್‌ಬಾಬು ಅವರನ್ನೂ ವಿಚಾರಣೆ ಮಾಡಿರುತ್ತಾರೆ, ಮುತ್ತಣ್ಣನನ್ನು ವಿಚಾರಣೆ ಮಾಡಿರುತ್ತಾರೆ, ಜೈಲ್‌ನಲ್ಲಿರತಕ್ಕಂಥ ಸಿಬ್ಬಂದಿವರ್ಗದವರನ್ನೂ ವಿಚಾರಣೆ ಮಾಡಿರುತ್ತಾರೆ.

೧-೩೦ ಪಿ.ಎಂ.

It is a matter of enquiry. ಅವರು ಮರಗಳನ್ನು ಬರೀ ಸೌದೆಗೆ ಕಡಿದಿದ್ದಾರೋ ಅಥವಾ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಕಡಿದಿದ್ದಾರೋ ಎನ್ನುವುದನ್ನು ವಿಚಾರಣೆ ಮಾಡಿಸುತ್ತಿದ್ದೇವೆ. ಮತ್ತು ಅವರನ್ನು ಸಸ್ಪೆಂಡ್ ಸಹ ಮಾಡಿದ್ದೇವೆ. ಇಲಾಖಾ ವಿಚಾರಣೆಯನ್ನು ಸಹ ಮಾಡಿಸುತ್ತಿದ್ದೇವೆ. ಆ ಮೇಲೆ ಶ್ರೀ ಸುರೇಶಬಾಬು ಎನ್ನುವರ ಮೇಲೆ ಕ್ರಿಮಿನಲ್ ಕೇಸ್ ಹಾಕದೆ ಇರುವುದರಿಂದ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಕೊಡಗುರವರಿಗೆ ತಕ್ಷಣ ತಿಳಿಸಿ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕೆಂದು ತಿಳಿಸಿದ್ದೇವೆ. ತಕ್ಷಣ ನಾವು ಕ್ರಮ ತೆಗೆದುಕೊಂಡಿದ್ದೇವೆ. ನಿನ್ನೇ ತಾರೀಖು ರಾತ್ರಿ ತಕ್ಷಣ ಎಸ್. ಪಿ. ಮೈಸೂರುರವರನ್ನು ಕಳುಹಿಸಿಕೊಟ್ಟು ಕ್ರಮ ತೆಗೆದುಕೊಂಡಿದ್ದೇವೆ. ಸರ್ಕಾರದ ಕಡೆಯಿಂದ ಯಾವುದೇ ಲ್ಯಾಪ್ಸ್ ಆಗಿಲ್ಲವೆಂದು ನನಗನಿಸುತ್ತದೆ. ನಾವು ಈಗ ಇಲಾಖಾ ವಿಚಾರಣೆ ಮಾಡುತ್ತಿರುವುದರಿಂದ ಹಾಗೂ ಕ್ರಿಮಿನಲ್ ಕೇಸ್ ಹಾಕುತ್ತಿರುವುದರಿಂದ ಸಿ. ಒ. ಡಿ. ಎನ್‌ಕ್ವೈರಿ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಹೇಳಿದ್ದಾರೆ. ಏನೆಂದರೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜನೀಯರ್ ಅಥವಾ ಸಂಬಂಧಪಟ್ಟ ಜೂನಿಯರ್ ಇಂಜಿನೀಯರ್ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು. ಇಲ್ಲಿ ಇಂಟರ್ ಡಿಪಾರ್ಟ್‌ಮೆಂಟ್ಸ್ ಇನ್‌ವಾಲ್ವ್ ಆಗಿರುವುದರಿಂದ ಸಿ.ಒ.ಡಿ. ತನಿಖೆಯಾದರೆ, ಹಿಂದೆ ಈ ರೀತಿ ಎಷ್ಟು ಸಾರಿ ವೆಹಿಕಲ್ಸ್ ಕೊಟ್ಟಿದ್ದಾರೆ ? ಏನೇನು ಮಾಡಿದ್ದಾರೆ ಎಲ್ಲಾ ಬಯಲಿಗೆ ಬರುತ್ತದೆ. ನಾವು ಆ ಹಳ್ಳಿಯವರನ್ನು ಅಭಿನಂದಿಸಬೇಕು. ಅವರಿಂದ ಈ ಕೇಸ್ ಬಯಲಿಗೆ ಬಂತು. ಇಲ್ಲದಿದ್ದರೆ ಬರುತ್ತಿರಲಿಲ್ಲ. ಇದೇ ರೀತಿ ಎಲ್ಲೆಲ್ಲಿ ಮಾಡಿದ್ದಾರೆ ಎನ್ನುವ ವಿಚಾರ ತಿಳಿದುಕೊಳ್ಳುವ ಸಲುವಾಗಿ ತಾವು ಇದನ್ನು ಸಿ.ಒ.ಡಿ.ಗೆ ರೆಫರ್ ಮಾತಿ. ನೀವು ಈಗ ಎನ್‌ಕ್ವೈರಿ ಮಾಡುತ್ತಿರುವುದು ಒಂದು ಇಲಾಖೆಗೆ ಮಾತ್ರ ಸಂಬಂಧಪಟ್ಟಿರುತ್ತದೆ. ಉಳಿದ ಇಲಾಖೆಗಳ ಬಗ್ಗೆ ಏನು ಎನ್ನುವುದು ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ತಾವು ಸಿ.ಒ.ಡಿ.ಗೆ ಒಪ್ಪಿಸುವುದು ಉಚಿತ. ನೀವು ನಿಮ್ಮ ಡಿಪಾರ್ಟ್‌ಮೆಂಟ್ ಬಗ್ಗೆ ಮಾತ್ರ ಎನ್‌ಕ್ವೈರಿ ಮಾಡಿಸುತ್ತೀರಿ. ಉಳಿದ ಡಿಪಾರ್ಟ್‌ಮೆಂಟ್ಸ್ ಬಗ್ಗೆ ಏನು ಮಾಡುತ್ತೀರಿ. ಆದಕ್ಕೆ ದಯವಾಡಿ ಸಿ.ಒ.ಡಿ. ತನಿಖೆಗೆ ಒಪ್ಪಿಕೊಳ್ಳಲೇಬೇಕು.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸಿ.ಒ.ಡಿ.ಗೆ ವಹಿಸತಕ್ಕಂಥಾದ್ದು ಏನಿದೆ ? ಇಲ್ಲಿ ಯಾರ ಮೇಲೂ ನಮಗೆ ಅನುಮಾನವಿಲ್ಲ. ಮತ್ತು ತನಿಖೆಗೆ ಹಿಂಜರಿಯತಕ್ಕಂಥ ಪ್ರಶ್ನೆಯೇ ಇಲ್ಲ. ಇಲಾಖಾ ವರದಿ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇರೆ ಇಲಾಖೆಯ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುವ ಅಧಿಕಾರ ನಮಗಿಲ್ಲವೆಂದು ತಾವೇ ಹೇಳಿದಿರಿ. There will be same fate of enquiry.

ಶ್ರೀ ವೀರಣ್ಣ.— ನಾವು ಇಲ್ಲಿ ಯಾರನ್ನು ಡಿಫೆಂಡ್ ಮಾಡಿಕೊಳ್ಳುವಂತಹ ಪ್ರಶ್ನೆ ಇಲ್ಲ. ಸರ್ಕಾರ ಎಲ್ಲಾ ರೀತಿಯ ಕ್ರಮ ತೆಗೆದುಕೊಂಡಿದೆ. ಅಂದ ಮೇಲೆ ಸಿ.ಒ.ಡಿ.ಗೆ ಒಪ್ಪಿಸತಕ್ಕಂಥ ಪ್ರಶ್ನೆ ಎಲ್ಲಿ ಬರುತ್ತದೆ ? ಯಾರ ಮೇಲೂ ಸಂಶಯ ಪಡುವಂತಹ ಪ್ರಶ್ನೆಯೇ ಇಲ್ಲ. There is no

question of suppression here. I have fairly admitted that it is an illegal act and the Government will not hesitate to take action provided under law. ಇಲಾಖಾ ವರದಿ ಮೇಲೆ ನಾವು ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ. ಆದ್ದರಿಂದ ಇಲ್ಲಿ ಸಿ.ಒ.ಡಿ. ಎನ್‌ಕ್ವೈರಿ ಪ್ರಶ್ನೆ ಬರುವುದಿಲ್ಲ.

SRI MALLIKARJUN M. KHARGE.— My intention is that several Departments are involved. I am not doubting about your action.

ಅಧ್ಯಕ್ಷರು,— ಇನ್‌ವೆಸ್ಟಿಗೇಶನ್ ಸರಿಯಾಗಿ ನಡೆದಿದೆ. ಪೋಲೀಸಿನವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆಯಿತು ಬಿಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಜ್ಯೂರೀಸಡಿಕ್ಷನ್‌ನಲ್ಲಿ ಬರಬೇಕಲ್ಲ ಅಧ್ಯಕ್ಷರೇ ? ಜೈಲರ್, ಯಾರು ಇರುತ್ತಾರೊ ಅವರ ಬಗ್ಗೆ ವಿಚಾರಣೆ ಮಾಡುತ್ತಾರೆ. ಉಳಿಕೆ ಡಿಪಾರ್ಟ್‌ಮೆಂಟ್ಸ್ ಬಗ್ಗೆ ಏನು ? How far the Forest Department is involved ? How far the PWD co-operated in this act ? This is very important. ಮುಕ್ತವಾಗಿ ಎನ್‌ಕ್ವೈರಿ ಮಾಡುವುದರಲ್ಲಿ ತಪ್ಪೇನಿದೆ ? ಇದರಲ್ಲಿ ಮುಚ್ಚುಮರೆ ಏನಿದೆ ? ಸಿ.ಒ.ಡಿ. ಎನ್‌ಕ್ವೈರಿ ಮಾಡಿಸಿ. our own Department. Your own Police Department. Don't you have faith in them ?

ಶ್ರೀ ವೀರಣ್ಣ.— ಮಾನ್ಯ ಮಲ್ಲಿಕಾರ್ಜುನ ಎಂ. ಖರ್ಗೆಯವರು ಮಂತ್ರಿಗಳಾಗಿದ್ದವರು, ಪೋಲೀಸಿನವರ ಕರ್ತವ್ಯ ವೈಖರಿ ಬಗ್ಗೆ ಅನುಮಾನವಿದ್ದರೆ, ಅವರು ಸರಿಯಾಗಿ ತನಿಖೆ ಮಾಡುವುದಿಲ್ಲ ಹಾಗೂ ನ್ಯಾಯ ಸಿಗುವುದಿಲ್ಲವೆಂದರೆ ಆಗ ಸಿ.ಒ.ಡಿ.ಗೆ ಒಪ್ಪಿಸತಕ್ಕಂಥ ಪ್ರಶ್ನೆ ಬರುತ್ತದೆ. ಆದರೆ ಇಲ್ಲಿ ಪೋಲೀಸಿನವರ ಕಾರ್ಯ ವೈಖರಿ ಬಗ್ಗೆ ಸರ್ಕಾರಕ್ಕೆ ಆಗಲಿ ಬೇರೆಯವರಿಗೆ ಆಗಲಿ ಅನುಮಾನವಿಲ್ಲ. ಪೋಲೀಸಿನವರು ಸಂಬಂಧಪಟ್ಟ ಇಲಾಖೆಗೆ ವರದಿ ಕಳುಹಿಸಿಕೊಡುತ್ತಾರೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಕೇಸ್ ರಿಜಿಸ್ಟರ್ ಮಾಡುತ್ತಾರೆ. ಆದ್ದರಿಂದ ಸಿ.ಒ.ಡಿ. ಎನ್‌ಕ್ವೈರಿ ಬೇಕಾಗಿಲ್ಲ,

ಅಧ್ಯಕ್ಷರು.— ಆಯಿತು, ಈಗ ಡಿಮ್ಯಾಂಡ್ಸ್ ಬಗ್ಗೆ ಚರ್ಚೆ ಪ್ರಾರಂಭಿಸಲಿ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ಕೆ ಎಚ್. ಪಾಟೀಲ್ (ಗದಗ್).— ಬೇಡಿಕೆಗಳ ಕ್ರ. ಸಂ. ೫೬, ೯, ೫೭, ೫೪ ಮಂತ್ರಿ ಶ್ರೀ ಸಹಕಾರ, ಸಹಕಾರೀ ಉದ್ಯಮಗಳು ಧಾರ್ಮಿಕ ದತ್ತಿ ಮಂಡಿಸಿದ ಮೂರುಕಟ್ಟಿಗಳು ಮತ್ತು ಖನಿಷ್ಠ ಭೂ ಅಭಿವೃದ್ಧಿ ಇಲಾಖೆಗಳು.

ಮಾನ್ಯ ಸಭಾಧ್ಯಕ್ಷರೇ, ನಿನ್ನೆಯ ದಿವಸ ನಾನು ಸಹಕಾರಿ ಚಳುವಳಿ ಬಗ್ಗೆ ಕೆಲವು ಉಪೋದ್ಘಾತ ಮಾತುಗಳನ್ನು ಹೇಳಿದ್ದೇನೆ. ಈಗ ನಮ್ಮದೇ ಆದ ಸಹಕಾರಿ ಚಳುವಳಿಯ ಎಕ್ಸ್‌ರೇ ಮಾಡುವಂಥ ಕಾಲ ಬಂದಿದೆ. ಇದಕ್ಕಿಂತ ಮೊದಲು ಕರ್ನಾಟಕ ರಾಜ್ಯದ ಜನಸಂಖ್ಯೆ ನೋಡೋಣ. ೧೯೬೧ನೇ ಇಸವಿಯ ಜನಗಣತಿ ಪ್ರಕಾರ ೨,೩೫,೮೫,೦೦೦ ಜನ ಸಂಖ್ಯೆ ಇತ್ತು. ೧೯೮೧ನೇ ಇಸವಿಯ ಜನಗಣತಿ ಪ್ರಕಾರ ೩.೭೧,೩೬,೦೨೦ ಆಗಿದೆ ತಾವು ಕೊಟ್ಟ ಅಂಕಿ ಸಂಖ್ಯೆಗಳ ಪ್ರಕಾರ ಸಾಗುವಳಿದಾರರ ಸಂಖ್ಯೆ ೮೫,೫೪,೨೫೮ ಅಂದರೆ ೨೪.೭೫ ಪರ್ಸೆಂಟ್ ಆಗಿದೆ. ಒಕ್ಕಲುತನದಲ್ಲಿ ಕೆಲಸ ಮಾಡುವಂಥ ಕೆಲಸಗಾರರ ಸಂಖ್ಯೆ ೧೭,೫೫,೯೦೪ ಇದೆ. ಈ ಹಿನ್ನೆಲೆಯಲ್ಲಿ ನಾವು ಎಷ್ಟು ಸಹಕಾರ ಸಂಘಗಳನ್ನು ಮಾಡಿದ್ದೇವೆ? ಎಷ್ಟು ಜನರನ್ನು ಅಫ್ಲೋಟ್ ಆಗಿದ್ದೇವೆ ಎಂಬುದನ್ನು ನೋಡೋಣ. ನನಗೆ ಅನ್ಯಾಯಲ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.